ಬಿಸಿಲು ಬೆಳದಿಂಗಳು - 200 / ವಿಜಯ ಕರ್ನಾಟಕ (12.1.2012)



ಬಿಸಿಲು ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಹಾಸ್ಯ ಮತ್ತು ವಿಡಂಬನೆ

**ಕೆ**ಲವು ವರ್ಷಗಳ ಹಿಂದೆ ನಡೆದ ಒಂದು ರೋಚಕ ಘಟನೆ. ಶ್ರೀ ಎಸ್.ಎಂ ಕೃಷ್ಣರವರ ಸಚಿವ ಸಂಪುಟದಲ್ಲಿ ವಿದ್ಯಾಮಂತ್ರಿಗಳಾಗಿದ್ದ ಪ್ರೊಫೆಸರ್ ಬಿ.ಕೆ. ಚಂದ್ರಶೇಖರ್‌ರವರು ಬೆಂಗಳೂರಿನ ಆರ್.ಟಿ ನಗರದಲ್ಲಿರುವ ನಮ್ಮ ತರಳಬಾಳು ಕೇಂದ್ರಕ್ಕೆ ಆಗಿಂದಾಗ್ಗೆ ಬಂದು ನಮ್ಮನ್ನು ಭೇಟಿಯಾಗುತ್ತಿದ್ದರು. ರಾಜಕೀಯದಲ್ಲಿದ್ದೂ ಅದಕ್ಕೆ ಅಷ್ಟಾಗಿ ಅಂಟಿಕೊಳ್ಳದೆ ಅವರ ಹೆಸರಿನ ಹಿಂದೆ ಅಂಟಿಕೊಂಡಿರುವ ಪ್ರೊ. ಅಕ್ಷರಕ್ಕೆ ಅನುಗುಣವಾಗಿ ಅವರೊಬ್ಬ ವಿಶ್ವವಿದ್ಯಾನಿಲಯದ ಮೇಧಾವಿ ಪ್ರೊಫೆಸರಂತೆ ನಮಗೆ ಕಾಣಿಸುತ್ತಿದ್ದರು. ನಮ್ಮಿರ್ವರ ಮಧ್ಯೆ ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ವಿಷಯಗಳನ್ನು ಕುರಿತು ಸುದೀರ್ಘ ಸಂಭಾಷಣೆ, ಚರ್ಚೆ ನಡೆಯುತ್ತಿದ್ದವು. ಒಮ್ಮೆ ಮಾತಿನ ಪ್ರಸಂಗದಲ್ಲಿ ನಾಡಿನ ಹೆಸರಾಂತ ಕಲಾವಿದೆಯಾದ ಅವರ ಶ್ರೀಮತಿ ಲಕ್ಷ್ಮೀಯವರ ಅಭಿನಯ ಪ್ರಸ್ತಾಪಗೊಂಡಿತು. ಬಹಳ ಜನ ಹೆಣ್ಣುಮಕ್ಕಳು ಮದುವೆಯಾದ ಮೇಲೆ ಅವರಲ್ಲಿರುವ ಕಲಾಪ್ರತಿಭೆ ಅರಳಲು ಗಂಡಂದಿರು ಪ್ರೋತ್ಸಾಹಿಸುವುದಿಲ್ಲ. ಆದರೆ ಪ್ರೊ. ಬಿ.ಕೆ.ಸಿ ಇದಕ್ಕೆ ಅಪವಾದ. ಅವರ ಮಡದಿಗೆ ಎಲ್ಲ ರೀತಿಯ ಪ್ರೋತ್ಸಾಹ ನೀಡುವ ಕಲಾಪ್ರೇಮಿ ಹೃದಯವುಳ್ಳ ಅಪರೂಪದ ಪತಿ. 'ಗೃಹಭಂಗ' ಧಾರಾವಾಹಿಯಲ್ಲಿ ಶ್ರೀಮತಿ ಲಕ್ಷ್ಮೀ 'ಗಂಗವ್ವ'ನ ಪಾತ್ರಧಾರಿಯಾಗಿ ಹಳ್ಳಿಯ ಬೈಗುಳಗಳನ್ನು ಯಥಾವತ್ತಾಗಿ ಬಳಸಿ 'ಜಗಳಗಂಟಿ ಮಹಿಳೆ'ಯರಿಗೆ ಸವಾಲಾಗಿದ್ದ ಸಂಗತಿ ದೂರದರ್ಶನ ವೀಕ್ಷಕರೆಲ್ಲರಿಗೂ ಗೊತ್ತು. ಈ ಹಿನ್ನೆಲೆಯಲ್ಲಿ ಅವರು 'ಅಂತಹ ಕೆಟ್ಟ ಬೈಗುಳಗಳನ್ನು ಎಲ್ಲಿ ಕಲಿತರು?' ಎಂದು ಕೇಳಿದಾಗ ಪ್ರೊ. ಬಿ.ಕೆ.ಸಿಯವರಿಂದ ಬಂದ ಮುಗುಳ್ನಗೆಯ ಉತ್ತರ: "ನನ್ನ ಹೆಂಡತಿ ದಿನನಿತ್ಯ ಮನೆಯಲ್ಲಿ ನನ್ನ ಮೇಲೆಯೇ ಪ್ರಯೋಗ ಮಾಡಿ ಕಲಿತಿದ್ದಾಳೆ"! ಅವರ ಈ ಮಾತುಗಳನ್ನು ಕೇಳಿ ತಟ್ಟನೆ ಮೂಡಿಬಂದ ನಮ್ಮ ಪ್ರತಿಕ್ರಿಯೆ: "ನೀವು ಮಠಕ್ಕೆ ಪದೇ ಪದೇ ಏಕೆ ಬರುತ್ತಿದ್ದೀರೆಂದು ನಮಗೆ ಈಗ ಅರ್ಥವಾಗುತ್ತಿದೆ!' ಎಂದಾಗ ಬಿ.ಕೆ.ಸಿ ಬಿದ್ದು ಬಿದ್ದು ನಕ್ಕರು. ಇತ್ತೀಚೆಗೆ ನಾವು ಬೆಂಗಳೂರಿಗೆ ಹೋಗುವುದೂ ಕಡಿಮೆಯಾಗಿದೆ, ಅವರು ನಮ್ಮನ್ನು ಕಾಣುವುದೂ ಕಡಿಮೆಯಾಗಿದೆ. ಪ್ರಾಯಶಃ 'ಗೃಹಭಂಗ' ಧಾರಾವಾಹಿ ಮುಗಿದಿರುವುದರಿಂದ ಮನೆಯಲ್ಲಿ ಅವರ ನೆಮ್ಮದಿಭಂಗವೂ ಪರಿಸಮಾಪ್ತಿಗೊಂಡಿರಬೇಕೆಂದು ತೋರುತ್ತದೆ!

ನಗು ಮನುಷ್ಯನಿಗೆ ದೇವರಿಂದ ಬಂದ ವರದಾನ! ಭಯಂಕರ ಭವಸಾಗರವನ್ನು ದಾಟಲು ನಗು ಒಂದು ಹರಿಗೋಲು. ಬಸವಳಿದ ಮನಸ್ಸಿಗೆ ನಗು ಒಂದು ಟಾನಿಕ್. "ನಗುವುದು ಸಹಜ ಧರ್ಮ; ನಗಿಸುವುದು ಪರಧರ್ಮ" ಎನ್ನುತ್ತಾರೆ ಡಿ.ವಿ.ಜಿ. ನಗೆಯು ಹಗೆದೋರಿ ನಮಗಾಗದವರ ಬೆನ್ನಲ್ಲಿ ಇರಿಯುವ ಚೂರಿಯಾಗಬಾರದು; ಬದುಕಿನ ಹಾದಿಯಲ್ಲಿ ಕಂಪು ಬೀರುವ ಹೂಚೆಲ್ಲಿ ಬೆಳದಿಂಗಳ ತಂಪನ್ನು ನೀಡುವಂತಹದಾಗಬೇಕು. ದೇವರೂ ಸಹ ಹಾಸ್ಯಪ್ರಿಯ! "ನಗೆಮೊಗದ ಸುಲಿಪಲ್ಲ ಸೊಬಗನ ಕಂಡು ಮನಸೋತೆನವ್ವಾ" ಎಂದು ವೀರವಿರಾಗಿಣಿ ಅಕ್ಕಮಹಾದೇವಿಯು ತಾನು ಮನಸಾರೆ ಪ್ರೀತಿಸಿದ ಚೆನ್ನಮಲ್ಲಿಕಾರ್ಜುನನನ್ನು 'ನಗೆಮೊಗದವನು' ಎಂದು ಬಣ್ಣಿಸಿದ್ದಾಳೆ. "ನಗೆಮೊಗದರಸಾ, ಅವಧಾರು! ಕೂಡಲಸಂಗಮದೇವಾ, ಬಗಿದು ಹೊಗುವೆನು ನಾ ನಿಮ್ಮ ಮನವನು" ಎಂಬ ವಚನದಲ್ಲಿ ಬಸವಣ್ಣನವರು ಕೂಡಲಸಂಗಮದೇವನನ್ನು 'ನಗೆಮೊಗದರಸಾ' ಎಂದು ಹೃದಯತುಂಬಿ ವರ್ಣಿಸಿದ್ದಾರೆ. ಪುರಂದರ ದಾಸರೂ ಸಹ ತಮ್ಮ ಒಂದು ಕೀರ್ತನೆಯಲ್ಲಿ ಅವರ ಪರಮಾರಾಧ್ಯ ದೈವವಾದ ಕೃಷ್ಣನನ್ನು 'ನಗೆಮೊಗದರಸನೆ ನೀ ಬಾರೋ' ಎಂದು ಹೃದಯತುಂಬಿ ಕರೆದಿದ್ದಾರೆ. ಮಗುವಿನ ಕೆಂದುಟಿಗಳಲ್ಲಿ ತುಂಬಿ ತುಳುಕಿ ಹೊರಚೆಲ್ಲುವ ಹೂವಿನಂತಹ ನಿಷ್ಕಾರಣ ನಗುವನ್ನು, ನಗುವಾಗ ಗುಳಿಬೀಳುವ ಅದರ ಕೆನ್ನೆಗಳನ್ನು ಕಂಡು ಪುಳಕಿತರಾಗದವರಾರು! ನಗುವುದರಿಂದ ಮಾನಸಿಕ ಒತ್ತಡ ಕಡಿಮೆಯಾಗಿ ಆರೋಗ್ಯ ಸುಧಾರಿಸುತ್ತದೆ ಎಂಬುದು ಸಂಶೋಧನೆಗಳಿಂದ ಸಾಬೀತಾಗಿದೆ. ಆದ್ದರಿಂದಲೇ ಪೇಟೆ ಪಟ್ಟಣಗಳಲ್ಲಿ 'ಲಾಫಿಂಗ್ ಕ್ಲಬ್'ಗಳು ತಲೆ ಎತ್ತಿವೆ. ಯಾವ ಪತ್ರಿಕೆಯ ಪುಟವನ್ನು ತೆರೆದರೂ ಹಾಸ್ಯ ಸಿಂಚನ ಮಾಡುವ ಲೇಖನಗಳಿರುತ್ತವೆ; ವ್ಯಂಗ್ಯ ಚಿತ್ರಗಳು ಕಣ್ ಸೆಳೆದು ಕಚಕುಳಿಯಿಡುತ್ತವೆ. ಹಾಸ್ಯಸಂಜೆ, ಹಾಸ್ಯಗೋಷ್ಠಿ, ನಗೆಹಬ್ಬ ಇತ್ಯಾದಿಗಳ ಹೆಸರಿನಲ್ಲಿ ಹಾಸ್ಯವು ಕುಂಭದ್ರೋಣ ಮಳೆಯಾಗಿ, ಸೋನೆ ಮಳೆಯಾಗಿ ಇಳೆಗಿಳಿದು ಬರಡು ಬದುಕನ್ನು ಹಸಿರಾಗಿಸಲು ಸಹಾಯ ಮಾಡುವುದುಂಟು. ಸಾಹಿತ್ಯದಲ್ಲಿ ಹಾಸ್ಯವನ್ನು ಕುರಿತು ಸಂಶೋಧನೆ ಮಾಡಿ ಮಹಾಪ್ರಬಂಧವನ್ನು ಸಲ್ಲಿಸಿ ಡಾಕ್ಟರೇಟ್ ಪಡೆದವರೂ ಇದ್ದಾರೆ (ಉದಾ: 'ಕನ್ನಡ ಸಾಹಿತ್ಯದಲ್ಲಿ ಹಾಸ್ಯ': ಡಾ. ಎಂ.ಎಸ್ ಸುಂಕಾಪುರ). ಸಾಹಿತ್ಯ, ನಾಟಕ, ಸಿನೆಮಾಗಳಲ್ಲಿ ಹಾಸ್ಯದ ಸ್ಥಾನ ದೊಡ್ಡದಾದರೂ ಅದು ಚಕ್ರವರ್ತಿಯಾಗಿ ಎಂದೂ ಮೆರೆದದ್ದಿಲ್ಲ, ಅದರದೇನಿದ್ದರೂ ನಿಷ್ಠಾವಂತ ಸೇವಕನ ಪಾತ್ರ ಮಾತ್ರ; ತನ್ನ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಕಂಬದ ಮರೆಯಲ್ಲಿ ನಿಲ್ಲುವ ಸದ್ ಗೃಹಿಣಿಯಂತೆ!

ಸಂಸ್ಕೃತ ಎಂದಾಕ್ಷಣ ಎಲ್ಲರ ಕಣ್ಮುಂದೆ ಬರುವುದು ವೇದಗಳು, ಉಪನಿಷತ್‌ಗಳು, ಭಗವದ್ಗೀತೆ, ತರ್ಕ, ಮೀಮಾಂಸೆ ಇತ್ಯಾದಿ ಗಂಭೀರ ಅಧ್ಯಯನದ ವಿಷಯಗಳೇ! ಆದರೆ ಈ ಭಾಷೆಯ ಸಾಹಿತ್ಯದಲ್ಲಿಯೂ ಸಹ ಆಡು ಭಾಷೆಗಳಲ್ಲಿರುವಂತೆ ಹಾಸ್ಯ ಇಡಿಕಿರಿದಿದೆ ಎಂಬುದು ಅಷ್ಟಾಗಿ ಅನೇಕರಿಗೆ ಪರಿಚಯವಿಲ್ಲದ ವಿಚಾರ! ಸಂಸ್ಕೃತದಲ್ಲಿ ಕೇವಲ ಮುಖದಲ್ಲಿ ನಿರಿಗೆಗಳನ್ನು ಹೆಚ್ಚುಗೊಳಿಸುವ ಘನ ಗಂಭೀರ ವಿಷಯಗಳೇ ತುಂಬಿಲ್ಲ, ಮುಖದ ಗಂಟನ್ನು ಸಡಿಲಿಸಿ, ತುಟಿಗಳಲ್ಲಿ ನಗೆಯ ಮಂದಾರವನ್ನು ಅರಳಿಸುವ ವಿಷಯಗಳಿಗೂ ಇಲ್ಲಿ ಸ್ಥಾನವಿದೆ. ಈ ಕೆಳಗಿನ ಕೆಲವು ಮುಕ್ತಕಗಳು ಅದಕ್ಕೆ ಪುರಾವೆಯನ್ನು ಒದಗಿಸುತ್ತವೆ. ಧೀಮಂತರು ತಮ್ಮ ಕಾಲದ ಸದ್ ಬಳಕೆಯನ್ನು ಹೇಗೆ ಮಾಡಿಕೊಳ್ಳುವರೆಂಬಲ್ಲಿ 'ವಿನೋದ'ವೂ ಸೇರಿದೆ:

1. **ಕಾವ್ಯಶಾಸ್ತ್ರವಿನೋದೇನ ಕಾಲೋ ಗಚ್ಛತಿ ಧೀಮತಾಂ ।**
**ವ್ಯಸನೇನ ತು ಮೂರ್ಖಾಣಾಂ ನಿದ್ರಯಾ ಕಲಹೇನ ವಾ ॥**

ಕಾವ್ಯಶಾಸ್ತ್ರ ವಿನೋದಗಳಲ್ಲಿ
ಬಳಸುವರು ಕಾಲವನು ಧೀಮಂತರು
ನಿದ್ರೆ, ಕಲಹ, ವ್ಯಸನಗಳಲ್ಲಿ
ಕಳೆಯುವರು ಕಾಲವನು ಮೂರ್ಖರು!

2. **ವೈದ್ಯರಾಜ ನಮಸ್ತುಭ್ಯಂ ಯಮರಾಜಸಹೋದರಃ ।**
**ಯಮಸ್ತು ಹರತಿ ಪ್ರಾಣಾನ್ ವೈದ್ಯಃ ಪ್ರಾಣಾನ್ ಧನಾನಿ ಚ ॥**

ವೈದ್ಯರಾಜನೇ, ನಿನಗೆ ನಮೋ ನಮಃ!
ಯಮರಾಜ ಸಹೋದರನೇ, ನಿನಗೆ ನಮೋ ನಮಃ!
ಯಮನು ಅಪಹರಿಸುವನು ಪ್ರಾಣವನು
ನೀನು ಪ್ರಾಣ ಮತ್ತು ಹಣ ಎರಡನೂ!

3. **ಹರೋ ಹಿಮಾಲಯೇ ಶೇತೇ ಹರಿಃ ಶೇತೇ ಪಯೋನಿಧೌ**
**ಪದ್ಮಾ ಪದ್ಮಾಲಯೇ ಶೇತೇ ಮನ್ಯೇ ಮತ್ಕುಣಶಂಕಯಾ ॥**

ಹರನು ನೆಲೆಸಿಹನು ಹಿಮಾಲಯದಲ್ಲಿ;
ಹರಿಯು ನೆಲೆಸಿಹನು ಕ್ಷೀರಸಾಗರದಲ್ಲಿ;
ಲಕ್ಷ್ಮಿ ನೆಲೆಸಿಹಳು ಕಮಲದಲ್ಲಿ;
ರಕ್ತ ಹೀರುವ ತಿಗಣೆಗಳಿಗೆ ಹೆದರಿ!

4. **ಕನ್ಯಾ ವರಯತೇ ರೂಪಂ ಮಾತಾ ವಿತ್ತಂ ಪಿತಾ ಶ್ರುತಮ್ ।**
**ಬಾಂಧವಾಃ ಕುಲಮಿಚ್ಛಂತಿ ಮೃಷ್ಟಾನ್ನಮಿತರೇ ಜನಾಃ ॥**

ವಧುವು ಬಯಸುವಳು ರೂಪವಂತ ಗಂಡನ್ನು
ತಾಯಿ ಬಯಸುವಳು ಶ್ರೀಮಂತ ಅಳಿಯನನ್ನು
ತಂದೆ ಬಯಸುವನು ಓದಿದ ಗಂಡನ್ನು
ಬಂಧುಗಳು ಬಯಸುವರು ಕುಲಶೀಲನನ್ನು
ಮದುವೆಗೆ ಬಂದ ಇತರರು ಬಯಸುವರು
ಮೃಷ್ಟಾನ್ನ ಭೋಜನವನ್ನು!

5. **ವೃಕ್ಷಸ್ಯಾಗ್ರೇ ಫಲಂ ದೃಷ್ಟಂ ಫಲಾಗ್ರೇ ವೃಕ್ಷ ಏವ ಚ ।**
**ಅಕಾರಾದಿ ಸಕಾರಾಂತಂ ಯೋ ಜಾನಾತಿ ಸ ಪಂಡಿತಃ ॥**

ಮರದ ತುದಿಯೊಳಿಹುದು ಹಣ್ಣು
ಹಣ್ಣಿನ ತುದಿಯೊಳಿಹುದು ಮರ
ಅಕಾರಾದಿ ಸಕಾರಾಂತವಾದುದು, ಏನದು? (ಉತ್ತರ: 'ಅನಾನಸ್')

6. **ವೃಕ್ಷಾಗ್ರವಾಸೀ ನ ಚ ಪಕ್ಷಿರಾಜಃ**
**ತ್ರಿನೇತ್ರಧಾರೀ ನ ಚ ಶೂಲಪಾಣಿಃ ।**
**ತ್ವಗ್ವಸ್ತ್ರಧಾರೀ ನ ಚ ಸಿದ್ಧಯೋಗೀ**
**ಜಲಂ ಚ ಬಿಭ್ರನ್ ನ ಘಟೋ ನ ಮೇಘಃ ॥**

ಮರದ ತುದಿಯೊಳಿಹುದು, ಹಕ್ಕಿಯಲ್ಲ
ಮೂರು ಕಣ್ಣುಗಳಿಹವು, ಮುಕ್ಕಣ್ಣನಲ್ಲ
ನಾರುಮಡಿ ಉಟ್ಟಿಹುದು, ಸಿದ್ಧಯೋಗಿಯಲ್ಲ
ನೀರನ್ನು ಹೊತ್ತಿಹುದು, ಮೇಘ, ಗಡಿಗೆ ತಾನಲ್ಲ (ಉತ್ತರ: ತೆಂಗಿನಕಾಯಿ)

7. **ಚಕ್ರೀ ತ್ರಿಶೂಲೀ ನ ಹರಿರ್ನ ಶಂಭುಃ**
**ಮಹಾನ್ ಬಲಿಷ್ಠೋ ನ ಚ ಭೀಮಸೇನಃ ।**
**ಸ್ವಚ್ಛಂದಚಾರೀ ನೃಪತಿರ್ನ ಯೋಗೀ**
**ಸೀತಾವಿಯೋಗೀ ನ ಚ ರಾಮಚಂದ್ರಃ ॥**

ಚಕ್ರ-ತ್ರಿಶೂಲಧಾರಿ, ಹರಿಯಲ್ಲ, ಹರನಲ್ಲ
ಮಹಾಬಲಶಾಲಿಯಹುದು, ಭೀಮನಲ್ಲ
ಸ್ವಚ್ಛಂದದಿಂ ಅಲೆಯುವುದು, ರಾಜನಲ್ಲ, ಯೋಗಿಯಲ್ಲ
ಸೀತಾವಿಯೋಗಿ, ರಾಮಚಂದ್ರನಲ್ಲ (ಉತ್ತರ: ಗೂಳಿ)

8. **ಆತ್ತುಂ ವಾಂಛತಿ ಗಣಪತೇರಾಖುಂ ಕ್ಷುಧಾರ್ತಃ ಫಣೀ**
**ತಂ ಚ ಕ್ರೌಂಚರಿಪೋಃ ಶಿಖೀ ಗಿರಿಸುತಾಸಿಂಹೋಽಪಿ ನಾಗಾಶನಂ ।**
**ಇತ್ಥಂ ಯತ್ರ ಪರಿಗ್ರಹಸ್ಯ ಘಟನಾ ಶಂಭೋರಪಿ ಸ್ಯಾದ್ ಗೃಹೇ**
**ತತ್ರಾನ್ಯಸ್ಯ ಕಥಂ ನ ಭಾವಿಜಗತೋ ಯಸ್ಮಾತ್ ಸ್ವರೂಪಂ ಹಿ ತತ್ ॥**

ಗಣಪನಡಿಯೊಳಿರುವ ಮೂಷಿಕನ
ಹಸಿವಿನಿಂ ತಿನ್ನಲು ಹೆಡೆಯೆತ್ತಿ
ಹವಣಿಸುತಿದೆ ಶಿವನ ಕೊರಳೊಳಿಹ ನಾಗರ ಹಾವು!
ಆ ಹಾವ ತಿನ್ನಲು ಹೊಂಚುಹಾಕುತಿದೆ
ಗರಿಗೆದರಿ ಷಣ್ಮುಖನ ವಾಹನ ನವಿಲು!
ಆ ನವಿಲ ತಿನ್ನಲು ಹೂಂಕರಿಸಿ ಬಾಯ್ದೆರೆದಿದೆ
ಗಿರಿಸುತೆಯು ಕುಳಿತಿರುವ ಸಿಂಹ!
ಈ ಪರಿಯ ದ್ವೇಷ ಕಲಹಂಗಳು
ಮುಕ್ತಿಯ ನೆಲೆ ಶಿವನ ಕೈಲಾಸದೊಳಗಿರಲ್ಕೆ
ಬಂಧನದ ಬಲೆ ಭೂಲೋಕದೊಳಗಿರುವುದೇನು ಸೋಜಿಗವು!

12.1.2012

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑